https://www.kuvempuonline.com

93

**Q.P. Code – 10237-A**

**ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ , ಮೇ/ಜೂನ್ 2017**

*(ಹೊಸಬರಿಗೆ)*

**ಐಚ್ಛಿಕ ಕನ್ನಡ ಪತ್ರಿಕೆ – ೨**

**(SAB 430) ಸಾಹಿತ್ಯ ಸಂಕಥನ – ೨**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

1. **ಒಂದು** ಪದ್ಯ ಭಾಗದ ಭಾವ ಸ್ವಾರಸ್ಯವನ್ನು ಬರೆದು ವ್ಯಾಖ್ಯಾನ ಮಾಡಿ : **5**

(ಅ) ಬೆಳಗೊಳಗೆ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರ ವೆತ್ತದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟ
ಬಾಳ ತಳ್ಳುವುದಿದೆ ನೋಡಿ
ಅದು ಬಲುಕಷ್ಟದ ಕೆಲಸ.

(ಆ) ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮಣ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

2. **ಮೂವರು** ಕವಿಗಳ ಕುರಿತು ಟಿಪ್ಪಣಿ ಬರೆಯಿರಿ : **3 × 2 = 6**

(ಅ) ವೈದೇಹಿ

(ಆ) ಕುವೆಂಪು

(ಇ) ದೇವನೂರ ಮಹಾದೇವ

(ಈ) ಚೆನ್ನವೀರ ಕಣವಿ

3. **ಮೂರು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **3 × 5 = 15**

(ಅ) 'ಬತ್ತಲಾರದ ಗಂಗೆ' ಕವಿತೆಯ ಆಶಯವನ್ನು ನವ್ಯ ಸಾಹಿತ್ಯದ ಚಿಂತನೆಯ ಹಿನ್ನಲೆಯಲ್ಲಿ ಚರ್ಚಿಸಿ.

(ಆ) ಗಾಂಧಿ ಚಿಂತನೆಗಳನ್ನು ನಾವು ಮರೆತರೂ ಅದು ಸಲಹುವ ಪರಿಯನ್ನು 'ಗಾಂಧಿ' ಕವಿತೆಯ ಮೂಲಕ ಚಿತ್ರಿಸಿ.

(ಇ) 'ರಾಮ ಸೀತಾ ಮುಹುರ್ ಮಿಲನ' ಸಂದರ್ಭದಲ್ಲಿ ಮೂಡಿಬಂದ ರಾಮನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

(ಈ) ಶಿವ-ಗೌರಿಯ ಪಾತ್ರಗಳ ಪರಿ 'ಶಿವನ ಮೀಸುವ ಹಾಡು' ಕವಿತೆಯಲ್ಲಿ ಬಿಂಬಿತವಾದ ಬಗೆಯನ್ನು ಚರ್ಚಿಸಿ.

(ಉ) ಏಸುವಿನ ಕೊನೆಯ ದಿನಗಳ ವಿವರಗಳನ್ನು 'ಗೊಲ್ಗಾಥಾ' ಕಾವ್ಯ ಚಿತ್ರಿಸುವ ಕ್ರಮವನ್ನು ವಿಮರ್ಶೆ ಮಾಡಿ.



ಪು.ತಿ.ನೋ.

https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



4. ಒಂದು ಕಥಾಭಾಗವನ್ನು ಅರ್ಥ ಕೆಡದಂತೆ $\frac{1}{3}$ ಭಾಗಕ್ಕೆ ಸಂಕ್ಷೇಪಿಸಿ : **1 × 5 = 5**

(ಅ) ನಾನು ಸ್ಮಶಾನಕ್ಕೆ ಹೋಗಿ ಬರುವುದು ನಮ್ಮ ಕೇರಿಯ ಜನರಿಗೆ ಮೊದಮೊದಲು ಬಹಳ ವಿಚಿತ್ರವಾಗಿ ಕಾಣಿಸಿತ್ತು. ನಮ್ಮ ಬಡಾವಣೆಯಲ್ಲಿ ಯಾರಾದರೂ ಸತ್ತರೆ ಹೆಣ ಹೂಳಲು ಹಣದಲ್ಲಿ ರಿಯಾಯಿತಿ ಮಾಡಿಸಬೇಕೆಂದು ಕೆಲವರು ಕೇಳಲು ಬರ ತೊಡಗಿದರು. ಕೆಲವು ಸಲ ಸಾವಿನ ಪ್ರಮಾಣ ಪತ್ರವನ್ನು ನಾನು ಬರೆದು ಕೊಡುತ್ತಿದ್ದರಿಂದ ನನ್ನ ಶಿಫಾರಸ್ಸನ್ನು ಹೆಣ ಹೂಳುವವರು ಒಪ್ಪಿಕೊಳ್ಳುತ್ತಿದ್ದರು. ಹೀಗಾಗಿ ದಲಿತ ಹೆಣಗಳಿಗೆ ಹೂಳುವಾಗಲೂ ರಿಯಾಯಿತಿ ಸಿಗುತ್ತಿತ್ತು. ಒಂದು ರಾತ್ರಿ ಒಂಬತ್ತು ಗಂಟೆಗೆ ನಾನು ಸ್ಮಶಾನದ ಕಡೆಗೆ ಹೊರಟಿದ್ದೆ. ನನ್ನ ಗೆಳೆಯನೊಬ್ಬ ತಾನು ಬರುವುದಾಗಿ ದುಂಬಾಲು ಬಿದ್ದ. ನಾನು ಬೇಡವೆಂದರೂ ಅವನು ಕೇಳಲಿಲ್ಲ. ಹೋಗಲಿ ಎಂದು ನಾನು ಅವನನ್ನು ಜೊತೆಗೆ ಕೊಂಡು ಹೋದೆ. ಸ್ಮಶಾನದ ಗೇಟನ್ನು ತೆರೆದು ನಾವಿಬ್ಬರೂ ಹೋಗುತ್ತಿದ್ದಂತೆ ಅವನಿಗೆ ವಿಚಿತ್ರವಾದ ಅನುಭವ ಆಗತೊಡಗಿತು.

(ಆ) ಗುರು ಸ್ವಾಮಿ ಬಾಗಿಲು ಚಿಲಕ ಹಾಕಿಕೊಂಡ "ಹಂಚಿ" ಎಂದು ಪ್ರೀತಿಯಿಂದ ಕರೆಯುತ್ತಾ ಪೆಟ್ಟಿಗೆಯ ಬಾಗಿಲು ತೆರೆದು ಬಾಯಲ್ಲಿ ನೊರೆ ಕಾರುತ್ತಾ ಕೂತಿದ್ದ ಹುಚ್ಚ ನಾಯಿಯನ್ನು ಕಂಡು ಅವನ ಎದೆ ಬಾಯಿಗೇ ಬಂದಿತು. ನಾಯಿ ಒಮ್ಮೆಲೆ ಅವನ ಮೇಲೆರಗಿ ಸಿಕ್ಕಾಪಟ್ಟೆ ಕಚ್ಚಿತು. ಅವನು ತನ್ನ ದುಷ್ಕೃತ್ಯವನ್ನು ತಾನೇ ಹಳಿದುಕೊಂಡ. ಎಲ್ಲವನ್ನೂ ನೋಡುವ ಭಗವಂತ ಹೆಣ್ಣನ್ನು ನಾಯಿಯನ್ನಾಗಿ ಮಾಡಿ ತನಗೆ ತಕ್ಕ ಶಿಕ್ಷೆ ಕೊಟ್ಟ ಎಂದು ಹಲುಬಿದ. ನಾಯಿಯ ಹಲ್ಲಿನಿಂದ ಬಿಡಿಸಿಕೊಳ್ಳಲಾಗದೆ. ಅವನು ನೆಲದಲ್ಲಿ ಹೊರಳಿ ಸಹಾಯಕ್ಕಾಗಿ ಬೊಬ್ಬೆ ಹೊಡೆದು ಅಕ್ಕಪಕ್ಕದವರು ಬಂದು ಹುಚ್ಚು ನಾಯಿಯನ್ನು ಹೊಡೆದು ಕೊಂದರು. ಗುರುಸ್ವಾಮಿಗೆ ಹುಚ್ಚು ಹಿಡಿಯಿತು.

5. ಮೂರು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ : **3 × 2 = 6**

(ಅ) ಕಾಣಿಕೆ

(ಆ) ಡಾಂಬರೆಂಬ ಆಧುನಿಕತೆ

(ಇ) ಮಲೆಕುಡಿಯ ಜನಾಂಗ

(ಈ) ಮಹಾಕಾವ್ಯ

(ಉ) ಪ್ರಗತಿಶೀಲ ಸಾಹಿತ್ಯ

6. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾದ ಉತ್ತರ ಬರೆಯಿರಿ : **3 × 5 = 15**

(ಅ) 'ಸಂಜೀವನ ಸ್ವಪ್ನ' ಕಥೆಯಲ್ಲಿ ಬರುವ ತಮಾಷೆಯ ಸಂಗತಿಗಳನ್ನು ವಿವರಿಸಿ.

(ಆ) ಖತೀಜಾಬಿ ಜಮಾ ಅತ್‌ನವರಿಗೆ ಕಲಿಸಿದ ಪಾಠ ತೋರಿಸಿಕೊಡುವ ಧಾರ್ಮಿಕ ದಿವಾಳಿತನವೆಂಥದು? ವಿವರಿಸಿ.

(ಇ) 'ಡಾಂಬರು' ಹಳ್ಳಿ ಮೇಲೆ ಬೀರಿದ ಪ್ರಭಾವ ಯಾವ ಬಗೆಯದು? ವಿವರಿಸಿ.

(ಈ) ಸಾಹಿತ್ಯ ಮತ್ತು ಬದ್ಧತೆ ಲೇಖನದಲ್ಲಿನ ವಿಚಾರಗಳನ್ನು ಪರಿಚಯ ಮಾಡಿಕೊಡಿ.

(ಉ) ಪೂರ್ಣಸ್ವಾಮಿ ಅಯ್ಯಂಗಾರರು ತಮ್ಮ ಸುಳ್ಳಿನಲ್ಲಿ ತಾವೇ ಸಿಕ್ಕಿಕೊಂಡು ಒದ್ದಾಡುವ ಪರಿಯನ್ನು ಚಿತ್ರಿಸಿ.

7. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರವನ್ನು ಬರೆಯಿರಿ : https://www.kuvempuonline.com **2 × 7 = 14**

(ಅ) ವ್ಯಕ್ತಿ ತಾನು ಯೋಚಿಸುವುದಕ್ಕೆ ಪೂರಕವಾಗುತ್ತಾ ಇರುವಂತೆ ಕಾಣುವ ವಾಸ್ತವ ನಾಟಕದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿ.

(ಆ) ಸೀತಾಳ ದಾಂಪತ್ಯ ಜೀವನದ ವಿಷಮತೆಯ ನಾಟಕದಲ್ಲಿ ಮೂಡಿಬಂದ ರೀತಿಯನ್ನು ಚರ್ಚಿಸಿ.

(ಇ) 'ಸೆರಗಿನ ಕೆಂಡ'ವಾಗುವ ನಂಬಿಕೆಯ ಲೋಕದ ಚಿತ್ರಣವನ್ನು ವಿಮರ್ಶೆ ಮಾಡಿ.

8. ಎರಡು ಪ್ರಶ್ನೆಗಳಿಗೆ ತರ್ಕಬದ್ಧವಾದ ಉತ್ತರ ಬರೆಯಿರಿ : **2 × 7 = 14**

(ಅ) ನವೋದಯ ಸಾಹಿತ್ಯಕ್ಕೆ ಒದಗಿ ಬಂದ ಪ್ರೇರಣೆ–ಪ್ರಭಾವಗಳನ್ನು ಕುರಿತು ಬರೆಯಿರಿ.

(ಆ) 'ದಲಿತ ಸಾಹಿತ್ಯ' ಎಂದರೇನು? ಈ ಕುರಿತ ಚರ್ಚೆಗಳನ್ನು ಮತ್ತು ಪ್ರಮುಖ ಕೃತಿಗಳನ್ನು ಕುರಿತು ಬರೆಯಿರಿ.

(ಇ) 'ಆಧುನಿಕ ಕನ್ನಡ ಸಾಹಿತ್ಯ'ದಲ್ಲಿ ಕಾಣುವ ವಿಶೇಷವಾದ ನೋಟಗಳನ್ನು ಕುರಿತು ಬರೆಯಿರಿ.



https://www.kuvempuonline.com

https://www.kuvempuonline.com

https://www.kuvempuonline.com